**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ಬಿಳಿಕೆರೆ, ಕಾ ಮತ್ತು ಪಾ ಉಪವಿಭಾಗ
ಚಾ.ವಿ.ಸ.ನಿ.ನಿ., ಬಿಳಿಕೆರೆ

ದೂರವಾಣಿ ಸಂಖ್ಯೆ: 08222-240377
E-mail: aeebilikere@rediffmail.com

ಸಂಖ್ಯೆ: ಸ.ಕಾ.ಇಂ(ವಿ)/ತಾಂ.ಸ/ಬಿ.ಉ.ವಿ/ಕ/2018/ 328- ದಿನಾಂಕ: 19/06/18.

**ದಿನಾಂಕ:06.06.2018 ರಂದು ಚಾ.ವಿ.ಸ.ನಿ.ನಿ., ಬಿಳಿಕೆರೆ ಉಪ ವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆ ನಡಾವಳಿಗಳು.**

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ರವರ ಅಧ್ಯಕ್ಷತೆಯಲ್ಲಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುಣಸೂರು ರವರ ಉಪಸ್ಥಿತಿಯಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬಿಳಿಕೆರೆ ಉಪ ವಿಭಾಗ ರವರು ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಅಧಿಕಾರಿಗಳು, ಗ್ರಾಹಕರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ಸ್ವಾಗತ ಕೋರಿದರು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರರು**

1. ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸೂರು.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಚಾ.ವಿ.ಸ.ನಿ.ನಿ., ಬಿಳಿಕೆರೆ
4. ಶಾಖಾಧಿಕಾರಿಗಳು: ಬಿಳಿಕೆರೆ ಶಾಖೆ, ಬೋಳನಹಳ್ಳಿ ಶಾಖೆ ಮತ್ತು ಕೆ.ಎಸ್.ಗದ್ದಿಗೆ ಶಾಖೆ
5. ಹಿರಿಯ ಸಹಾಯಕರು ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.

## ಮಾನ್ಯ ಗ್ರಾಹಕರ ಸಲಹೆ/ಕೋರಿಕೆಗಳು:

1. **ಶ್ರೀ** ನಿಂಗರಾಜು, ದೊಡ್ಡೇಕೊಪ್ಪಲು, ಮೊ. ನಂ.: 9743746093 ಇವರು UNIP TCಗೆ ಹೊಸ ಸಂಪರ್ಕ ಕೊಡಿಸಲು ಕೇಳಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು UNIP TC ಗೆ ಸಂಪರ್ಕ ಕಲ್ಪಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹಾಗೂ ಶಾಖಾಧಿಕಾರಿಯವರಿಗೆ ಸೂಚಿಸಿದರು.

2. ಶ್ರೀ ಪುಟ್ಟರಾಜು, ಹೊಸರಾಮನಹಳ್ಳಿ ಮೊ.ನಂ.: 9880813259 ರವರು ಮತನಾಡಿ ಬೋಳನಹಳ್ಳಿ ರಸ್ತೆ ಬಡಾವಣೆಗೆ ಹೆಚ್ಚುವರಿ TC ಮತ್ತು ಜೋತು ಬಿದ್ದಿರುವ ಲೈನ್‌ಗೆ ಮಧ್ಯಂತರ ಕಂಬಗಳನ್ನು ಅಳವಡಿಸಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿ, ಬೋಳನಹಳ್ಳಿ ಶಾಖೆ ವರವರಿಗೆ ಸ್ಥಳ ಪರೀಶೀಲನೆ ನಡೆಸಿ ಹೆಚ್ಚುವರಿ TC ಮತ್ತು ಮಧ್ಯಂತರ ಕಂಬ ಅಳವಡಿಸಲು ಕ್ರಮ ಜರುಗಿಸಲು ಸೂಚಿಸಿದರು.

3. ಶ್ರೀ ಬಾಬು, ಬಿಳಿಕೆರೆ ಗ್ರಾಮ, ಗ್ರಾಮ ಪಂಚಾಯಿತಿಯ ಸದಸ್ಯರು ಮೊ.ನಂ.: 9980122907 ರವರು ಮತನಾಡಿ ಬಿಳಿಕೆರೆ ಟೌನ್ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ನಿರಂತವಾಗಿರುವ ಬಗ್ಗೆ ಮತ್ತು ಬಸ್ಟ್ಯಾಂಡ್ ಪಕ್ಕದ ರಸ್ತೆ ಯಿಂದ ಮೈಸೂರು ಮೈನ್ ರಸ್ತೆಯವರೆಗಿನ ಜೋಡಿ ರಸ್ತೆಯಲ್ಲಿ ಮಧ್ಯ ಅಳವಡಿಸಿರುವ ವಿದ್ಯುತ್ ಕಂಬಕ್ಕೆ ವೈರಿಂಗ್ ಮತ್ತು ದೀಪ ಅಳವಡಿಸಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಅಡಚಣೆ ಕಡಿಮೆ ಮಾಡಲು ಬ್ರೇಕರ್ ಅಳವಡಿಸುವ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸೂಚಿಸಿದರು ಹಾಗೂ preventive maintenance ಮಾಡಲು ಸೂಚಿಸಿದರು ಅನಗತ್ಯ LCಗಳನ್ನು ತೆಗೆದುಕೊಳ್ಳದಿರಲು ಸೂಚಿಸಿದರು.

ಮುಂದುವರೆದು ರಸ್ತೆಯ ಮಧ್ಯಭಾಗದಲ್ಲಿರುವ ಕಂಬಗಳಿಗೆ ವಿದ್ಯುತ್ ದೀಪ ಅಳವಡಿಸಲು ಸಂಭಂದಿಸಿದ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಜರುಗಿಸಲು ಸೂಚಿಸಿದರು.

4. ಶ್ರೀ ಲೋಕೇಶ್, ದಾಸ್ತಿಕೊಳ, ಬಿಳಿಕೆರೆ ಮೊ.ನಂ.: 9964071720 ರವರು ಮತನಾಡಿ ದಾಸ್ತಿಕೊಳದಿಂದ ಬಿಳಿಕೆರೆವೆರೆಗೆ ಬೀದಿ ದೀಪ ಇಲ್ಲದೆ ಇರುವ ಬಗ್ಗೆ ಆಕ್ಷೇಪಿಸಿ ಬೀದಿ ದೀಪ ವ್ಯವಸ್ಥೆ ಮಾಡಿಕೊಡಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುವುದರಿಂದ ಗ್ರಾಮ ಪಂಚಾಯಿತಿಗೆ ತೆರಳಿ ತಮ್ಮ ಅರ್ಜಿಯನ್ನು ನೀಡಲು ಸೂಚಿಸಿದರು.

5. ಶ್ರೀಮತಿ ಭಾಗ್ಯಮ್ಮ, ಬಿಳಿಕೆರೆ ಮೊ.ನಂ.: 9343765706 ರವರು ಮತನಾಡಿ ಬಿಳಿಕೆರೆ ಗ್ರಾಮದ ರಸ್ತೆ ಮಧ್ಯ ಹಾದು ಹೋಗಿರುವ ಸರ್ವೀಸ್ ಮೈನ್ ರೋಡ್ ಕ್ರಾಸ್ ಆಗಿರುವ ಬಗ್ಗೆ ವಿವರಿಸಿ ಪ್ರತ್ಯೇಕವಾಗಿ ರಸ್ತೆಯ ಎರಡು ಬದಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿ ಬಿಳಿಕೆರೆ ಯವರಿಗೆ ಪರೀಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

6. ಶ್ರೀಮತಿ ವಂಸಂತಮ್ಮ, ಹನುಮಂತಪುರ ಮೊ.ನಂ.: 9880887916 ರವರು ಮಾತನಾಡಿ ಹನುಮಂತಪುರ ವ್ಯಾಪ್ತಿಯಲ್ಲಿನ TC ಗಳ Fuse ಪದೇ ಪದೇ ಸುಟ್ಟು ಹೋಗುತ್ತಿದ್ದು ವಿದ್ಯುತ್ ಅಡಚಣೆ ಆಗುತ್ತಿರುವ ಬಗ್ಗೆ ತಿಳಿಸಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಕೆ.ಎಸ್.ಗದ್ದಿಗೆ ಶಾಖಾಧಿಕಾರಿ ಯವರಿಗೆ ದೂರನ್ನು ಪರಿಶೀಲಿಸಿ ಕ್ರಮ ಜರುಗಿಸಲು ಸೂಚಿಸಿದರು.

7. ಶ್ರೀ ಶಿವಣ್ಣ, ವಡ್ಡರಹಳ್ಳಿ ಮೊ.ನಂ.: 9343209684 ರವರು ಮತನಾಡಿ ವಡ್ಡರಹಳ್ಳಿಯ ಗೆರಸಹಳ್ಳಿ ಸರ್ವೆ ನಂಬರ್‌ನಿಲ್ಲಿ ಇರುವ ಐಪಿ ಸ್ಥಾವರಗಳಿಗೆ ಹೆಚ್ಚುವರಿ ಟಿ.ಸಿ ವ್ಯವಸ್ಥೆಮಾಡಿಕೊಡಲು ಕೋರಿದರು. ಮನುಗನಹಳ್ಳಿ ಮತ್ತು ಹಳೇಬೀಡು ಗ್ರಾಮ ವ್ಯಾಪ್ತಿಯಲ್ಲಿ ಸರ್ವೀಸ್ ಮೈನ್ ರಸ್ತೆಯಲ್ಲಿ ಹಾದುಹೋಗುವ ವಾಹನಗಳಿಗೆ ತಗುಲುತ್ತಿದ್ದು, ಮೂಡಲಕೊಪ್ಪಲು ಗೇಟ್ ನಲ್ಲಿ ಇರುವ ಬೀಚನಹಳ್ಳಿ ರೋಡ್ ಹತ್ತಿರ ಲೈನ್ ಜೋತುಬಿದ್ದಿರುವ ಬಗ್ಗೆ, ಮತ್ತು ಎಲ್.ಇ.ಡಿ ಬಲ್ಬ್ ವಿತರಿಸಿಸಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಬಿಳಿಕೆರೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿಯವರಿಗೆ ಮೇಲ್ಕಂಡ ಎಲ್ಲಾ ವಿವರಗಳನ್ನು ಪರೀಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

ಅಂತಿಮವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವರ್ಗದವರು ಹಾಗೂ ಗ್ರಾಹಕರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು

**"ವಂದನೆಗಳೊಂದಿಗೆ"**

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಬಿಳಿಕೆರೆ ಉಪವಿಭಾಗ